ಪ್ರಭುಗಳು ರವಷ್ಟು ತಡವಾಗಿಯೇ ಅರಮನೆ ಸೇರಿ ಸ್ನಾನಪಾನಾದಿ, ಉಪಾಹಾರ ಮುಗಿಸಿ, ಅಂತಃಪುರ ಸಮೂಹದವರೊಡನೆ ಸರಸ ಸಲ್ಲಾಪದಲ್ಲಿರಲು, ಉತ್ತರ ದಿಸೆಯಲ್ಲಿ ಬಿಡಾರ ಹೂಡಿದಂತೆ ಜಮಾಯಿಸಿದ ಆ ರೈತ ಸಮೂಹವು, 'ಅರಸರು ತಮ್ಮ ಸಮ್ಮುಖಕ್ಕೆ ಬರುವಂತಾಗಬೇಕು' ಎಂದು ಕೂಗು ಹಾಕಿದರು. ರೈತರಷ್ಟೇ ಸಂಖ್ಯೆಯಲ್ಲಿ ಎದುರು ಬಂದ ರಾಜಭಟರು ಅವರನ್ನು ತಡೆದು, 'ಪ್ರಭುಗಳು ಮಂತ್ರಾಲೋಚನೆಯ ಸಭೆಯಲ್ಲಿರುವರು. ನಿಮಗೆ ಇದೀಗ ಎರಗಿ ಬಂದಿರುವ ಸಂಕಷ್ಟಗಳಾದರೂ ಏನು ಎಂದು ಅರುಹುವಿರಾದಲ್ಲಿ ಅದನ್ನು ಒಂದೂ ವಾಕ್ಯ ತಪ್ಪದೆ ಪ್ರಭು ಮುಖದಲ್ಲಿ ಒಪ್ಪಿಸಲಾಗುವುದು, ಅನುಮಾನಬೇಡ. ನಮ್ಮ ಅರಸರಾದರೋ ಲೋಕದ ಯಾರದೇ ದುಃಖ ದುಮ್ಮಾನಗಳನ್ನು ಕರ್ಣಪೂರ್ಣವಾಗಿ ಪರಾಂಬರಿಸುವುದರಲ್ಲಿ ಹಿಂದೆ ಬಿದ್ದವರಲ್ಲ. ಅದು ವಿದಿಶಾ ನಗರದ ಜನಕ್ಕೆ ಗೊತ್ತೇ ಇದೆ. ಅವರು ಪ್ರತಿನಿತ್ಯ ಪ್ರಾತಃಸಮಯ ಧ್ಯಾನ ಮೌನ ಜಪತಪಾದಿಗಳ ಬಳಿಕ ಅರಮನೆಯ ತುತ್ತತುದಿಯ ನೆತ್ತಿ ಮಾಡದಲ್ಲಿ ನಿಂತು ಕೆಳಗೆ ನಿಂತ ಪ್ರಜೆಗಳನ್ನು ಸಂಬೋಧಿಸಿ ಆಡುವ ಮಾತುಗಳನ್ನು ನೀವು ಕೇಳಿಸಿಕೊಂಡೇ ಇದ್ದೀರಿ. ಕ್ಷಮಿಸಿ, ನೀವು ವಿದಿಶಾ ನಗರದವರಲ್ಲವಲ್ಲ! ದೂರದೂರದ ಹಳ್ಳಿಗಳಿಂದ ಬಂದವರು. ಆದರೂ ಕರ್ಣಾಕರ್ಣಿಕೆಯಾಗಿ ಖಾವಂದರಾಡಿದ ಬೋಧಪ್ರದ ಮಾತುಗಳು ನಿಮ್ಮೆಲ್ಲರ ಕಿವಿಗೆ ಬಿದ್ದಿರಲಿಕ್ಕೂ ಸಾಕು'. ಹೀಗೆಂದ ಭಟ ಮುಖಂಡ, 'ಇದೇನೇ ಇರಲಿ ಈಗ ತಂಡೋಪತಂಡವಾಗಿ ಬಂದಿರುವ ನಿಮ್ಮ ಅಹವಾಲುಗಳೇನು ಹೇಳುವಂತವರಾಗಿರಿ' ಎಂದ. ಆಗ ರೈತರು. 'ಕಾವಲುಭಟರೇ ನೀವೇ ಇಷ್ಟು ನಯ ವಿನಯದಲ್ಲಿ ಮಾತನಾಡುವಿರಾದರೆ ಇನ್ನು ಆಳುವ ಮಹಾಪ್ರಭುಗಳು ನಮ್ಮೊಡನೆ ಅದೆಂತು ಚೆನ್ನಾಗಿ ಸಂಭಾಷಿಸಬಹುದೆಂದು ಊಹಿಸಿಯೇ ನಮಗೆ ಸಂತೋಷವೆನಿಸುತ್ತಿದೆ. ಇರಲಿ, ಈಗ ನಮಗೆ ಒದಗಿರುವ ಗಂಡಾಂತರವೆಂದರೆ ವರ್ಷವೆಲ್ಲ ನಾವು ಬೆವರು ಸುರಿಸಿ ಬೆಳೆದ ಬೆಳೆಯನ್ನೆಲ್ಲ ರಾತ್ರಿಯ ಹೊತ್ತು ಕಣ್ಣಿಗೆ ಕಾಣದಂತೆ ನುಗ್ಗುವ ಮದಗಜಗಳು, ಕಾಡುಕೋಣ, ಹಂದಿಗಳು ಕಬಳಿಸುತ್ತಿವೆಯಲ್ಲ. ಬೆಳೆದ ಬೆಳೆ ಕೈಗಿಲ್ಲ. ಕೈಗೆ ಬಂದದ್ದು ಬಾಯಿಗಿಲ್ಲ. ನಾವು ಉಣ್ಣಲಿಲ್ಲದೆ, ಉಡಲಿಲ್ಲದೆ ಕೃಶವಾಗುತ್ತಿರುವೆವಲ್ಲ' ಎಂಬ ಬಿನ್ನಹವಿಟ್ಟರು.

ರಾಜಭಟರು ಹೊಲಗದ್ದೆಗಳ ಮೇಲೆ ಆನೆ ಹಂದಿಯ ತುಳಿತವನ್ನು ಮಹಾರಾಜರ ಪಾದಕ್ಕೆ ಮುಟ್ಟಿಸಲು ಅಲ್ಲೇ ಆಸೀನರಾಗಿದ್ದ ಅಜಿತಸೇನರಿಗೂ ಅದು ಅರಿವಾಗಿ ಈರ್ವರೂ ಮುಹೂರ್ತಕಾಲ ಪರಸ್ಪರ ಮುಖಾವಲೋಕನ ಮಾಡಿಕೊಂಡರು. ಮಂತ್ರಿಗಳು ಹಗುರದಲ್ಲಿ ನಗಲು, ಪ್ರಭುಗಳು, 'ಆನೆಗಳ ಬಲವನ್ನು ಹಿಂದಕ್ಕೆ ಅಟ್ಟುವ ಯಾವುದಾದರೂ ಮಾರ್ಗವುಂಟೇ' ಅಂದರು. ಅಜಿತಸೇನರು ಅಂಥದೇನೂ ಆತುರವಿಲ್ಲದೆ ಸಾವಧಾನದಲ್ಲಿ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿದವರಂತೆ, 'ಹಾಗೆಲ್ಲಿಯಾದರೂ ಮಾಡಲುಂಟೇ ಪ್ರಭುವೇ' ಎಂದರು. ಮಹಾರಾಜರು ಅವಾಕ್ಕಾಗಿ ಮಂತ್ರಿಗಳತ್ತ ನೋಡುವಲ್ಲಿ, 'ಗಜಸಮೂಹವನ್ನು ಗತಿ ಕಾಣಿಸಿದರೆ ಅರಮನೆಗೇ ನಷ್ಟವಲ್ಲವೇ? ಅವು ಅರಮನೆಯ ಕಂಬಗಳು' ಅಂದರು. ಮುಂದಿನ ಸಂಭಾಷಣೆಯಾಗಿ, 'ಪ್ರಭೋ, ಇದೀಗ ತಾನೇ ನಾವು ಮಂದಿರ ಪ್ರದಕ್ಷಿಣೆಯಲ್ಲಿ ನೋಡಿದೆವಲ್ಲ, ಆನೆಗಳು ಮಾಡುತ್ತಿದ್ದ ದೇವಕಾಯಕವನ್ನು! ದೊಡ್ಡದೊಡ್ಡ ದಿಮ್ಮಿ, ಕಲ್ಲುಬಂಡೆಗಳನ್ನು ಹೇಗೆ ಹೊತ್ತು ತರುತ್ತಿದ್ದವಲ್ಲಾ. ಆಮೇಲೆ ನಮ್ಮ ಯುದ್ಧಗಳಲ್ಲಿ ಅವುಗಳ ಸಹಾಯ ಎಣಿಸಲುಂಟೆ? ಒಂದೊಂದೂ ಮದಗಜದ ಕಾಲ್ತುಳಿತಕ್ಕೆ ಸಿಕ್ಕ ಯಾವನಾದರೂ ಬಡ ಸೈನಿಕ ಬದುಕಿ ಉಳಿದದ್ದುಂಟೆ? ಹಾಗಾಗಿ ಅವು ಈ ಗಾಂವಟಿಗರ ಬೆಳೆಯನ್ನು ಉಂಡು, ತಿಂದು, ತುಳಿದು ಮದವೇರಿ ಕುಣಿಯಲಿ ಬಿಡಿ. ಮುಂದೆ ಅವು ಅರಮನೆಯತ್ತ ಸಾಕಿದ ಆನೆಗಳಾಗಿ ಬರುವಂತಾಗಲಿ. ಸದ್ಯಕ್ಕೆ ನಾವು ಕೈಗೊಂಡಿರುವ ಕೈಂಕರ್ಯವನ್ನು ಆ ಗಾಂವಟಿಗರಿಗೆ ಹೇಳಬೇಕಾಗಿದೆ ನಿಮ್ಮೆಲ್ಲ ಕಷ್ಟಗಳನ್ನೂ ಮರೆತು ದೇವಮಂದಿರದ ಈ ಅಂತಿಮ ನಿರ್ಮಾಣ ಘಳಿಗೆಯಲ್ಲಿ ಸಹಕರಿಸಿ.